Sri BASAVARAJ MAGAVI (Deputy Minister for Public Woks).—

(*a*) No.

(*b*) There is no proposal at present.

(*c*) This is being examined.

(*d*) No.

(*e*) Does not arise.

ಶ್ರೀ ಪಿ. ಅಂಜನಪ್ಪ.—(ಅ) ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಈ ರಸ್ತೆ 20 ಮೈಲಿಗಳಷ್ಟು ದೂರ ಇದೆ. ಆಂಧ್ರ ಬಾರ್ಡರ್‌ವರೆಗೆ ಇದೆ. ಆದಕಾರಣ ಈ ರಸ್ತೆಯ ರಿಪೇರಿ ಕೆಲಸವನ್ನು ಜಾಗ್ರತೆ ಮಾಡಿಸುತ್ತೀರಾ?

†ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ಹೇಳುತ್ತಿರುವ ರಸ್ತೆ ತಾಲ್ಲೂಕ್ ಬೋರ್ಡಿಗೆ ಸೇರಿರುವುದರಿಂದ ಅವರೇ ಆ ಕೆಲಸವನ್ನು ಮಾಡಿಸಬೇಕಾಗುತ್ತದೆ.

ಶ್ರೀ ಪಿ. ಅಂಜನಪ್ಪ.—ಅವರಲ್ಲಿ ದುಡ್ಡಿಲ್ಲ.

ಶ್ರೀ ಬಸವರಾಜ ಮಾಗಾವಿ.—ರ್ಯಾಂಡ್ ರೆವಿನ್ಯೂವನ್ನು ತಾಲ್ಲೂಕ್‌ಬೋರ್ಡ್‌ಗಳಿಗೆ ಕೊಟ್ಟ ಮೇಲೆ ಅವರಿಗೆ ಸಾಕಷ್ಟು ಹಣ ಸಿಗುತ್ತದೆ.

ಶ್ರೀ ಬಿ. ಎನ್. ರಾಮೇಗೌಡ.—ಇಂತಹ ಎಷ್ಟು ರಸ್ತೆಗಳನ್ನು ಇದುವರೆಗೆ ಲೋಕೋಪಯೋಗಿ ಇಲಾಖೆಯ ವಶಕ್ಕೆ ತೆಗೆದುಕೊಂಡಿದ್ದೀರಿ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸಭೆಗೆ ಹಿಂದೆಯೇ ತಿಳಿಸಿದಂತೆ ಇದುವರೆಗೆ 15 ಸಾವಿರ ಚಿಲ್ಲರೆ ಮೈಲಿಗಳಷ್ಟು ಲೋಕೋಪಯೋಗಿ ಇಲಾಖೆಗೆ ಸೇರಿಸಿಕೊಳ್ಳಲಾಗಿದೆ. ಈ ರಸ್ತೆಗಳನ್ನು ಸುವ್ಯವಸ್ಥಿತ ರೀತಿಗೆ ತರುವವರೆಗೆ ಹೊಸ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ಮುಂದೆ ತಾಲ್ಲೂಕ್‌ಬೋರ್ಡಿನವರೇ ರಸ್ತೆಗಳ ರಿಪೇರಿ ಕೆಲಸವನ್ನು ಮಾಡಿಸಬೇಕಾಗುತ್ತದೆ.

ಶ್ರೀ ಬಿ. ಎನ್. ರಾಮೇಗೌಡ.—ತಾಲ್ಲೂಕ್ ಬೋರ್ಡಿನವರಿಗೆ ಈ ರಸ್ತೆಯ ಕೆಲಸವನ್ನು ಮಾಡಿಸುವುದಕ್ಕೆ ಹೆಚ್ಚಿನ ತೊಂದರೆ ಇರುವುದರಿಂದ ಲೋಕೋಪಯೋಗಿ ಇಲಾಖೆಗೆ ಸೇರಿಸಿಕೊಳ್ಳುವ ಬಗ್ಗೆ ಪುನರ್ವಿಮರ್ಶೆ ಮಾಡುತ್ತೀರಾ?

ಶ್ರೀ ಬಸವರಾಜ ಮಾಗಾವಿ.—ಪುನರ್ವಿಮರ್ಶೆ ಮಾಡಬಹುದು.

Mr. SPEAKER.—Sri Raja Pid Naik has been authorised to put the Question.

Closure of Traffic on Muddebihal–Bijapur–Hoovina-hippargi Road during Rainy Season

802. Sri RAJA PID NAIK (Shorapur) [On behalf of SRI S. M. GUREDDI (Muddebihal)].—

Will the Minister for Public Works be pleased to state :—

(*a*) whether it has come to their notice that the traffic on Muddebihal–Bijapur–Hoovinahippargi road is being closed during rainy season ;

(*b*) whether it is a fact that the road from Muddebihal to Hoovinahippargi is in a bad condition ;

(*c*) the number o nalas on the road between Muddebihal and Hoovinahippargi ?

Sri BASAVARAJ MAGAVI (Deputy Minister for Public Works).—

(*a*) Yes.

(*b*) No.

(*c*) There are 27 nalas.

Sri RAJA PID NAIK.—Is there any proposal to make this an all-weather road, this being an important link connecting Bijapur and other places ?

† ಶ್ರೀ ಬಸವರಾಜ ಮಾಗಾವಿ.—ಸರ್ಕಾರದವರು ಈಗಾಗಲೇ ಈ ರಸ್ತೆಯ ಮೇಲೆ ಸಾಕಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಮತ್ತು ಇನ್ನೂ ಖರ್ಚು ಮಾಡುತ್ತಿದ್ದಾರೆ. ಈ ರಸ್ತೆಯನ್ನು ಸುವ್ಯವಸ್ಥಿತ ರೀತಿಗೆ ತರುವ ವಿಷಯದಲ್ಲಿ ಸರ್ಕಾರದವರು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

Sri RAJA PID NAIK.—How many bridges have been completed ?

ಶ್ರೀ ಬಸವರಾಜ ಮಾಗಾವಿ.—27 ನಾಲೆಗಳ ಪೈಕಿ 14 ಮುಗಿದಿವೆ.

ಶ್ರೀ ಕೆ. ಪಿ. ನಾಡಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ ಬಂದಿದೆ ಎಂದು ಹೇಳಿದ್ದೀರಿ, (ಅ) ಪ್ರಶ್ನೆಗೆ ಉತ್ತರವಾಗಿ ನಿಜವಲ್ಲ ಎಂದು ಹೇಳಿದ್ದೀರಿ. ಇದು ಒಂದಕ್ಕೊಂದು ವಿರುದ್ಧವಾದ ಅರ್ಥವನ್ನು ಕೊಡುವುದಿಲ್ಲವೇ ?

ಶ್ರೀ ಬಸವರಾಜ ಮಾಗಾವಿ.—ನಾನು ಹೇಳಿದ್ದು ಹಂತ ಹಂತವಾಗಿ ಸುಧಾರಣೆಗಳನ್ನು ಮಾಡಲಾಗುತ್ತಿದೆ ಎಂದು. ಈಗ 14 ನಾಲೆಗಳ ಕೆಲಸ ಮುಗಿದಿದ್ದು ಉಳಿದ ನಾಲೆಗಳ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈ ರಸ್ತೆ ಎಲ್ಲಾ ರೀತಿಯಿಂದಲೂ ಸುವ್ಯವಸ್ಥಿತ ರೀತಿಯಿಂದ ಇದೆ ಎಂದು ಹೇಳಲಿಲ್ಲ.

ಶ್ರೀ ಸದಾಶಿವಪ್ಪ ಪಾಟೀಲ್.—(ಅ) ಪ್ರಶ್ನೆಗೆ ಬಂದಿದೆ ಎಂದು ಹೇಳಿದ್ದೀರಿ, (ಅ) ಪ್ರಶ್ನೆಗೆ ನಿಜವಲ್ಲ ಎಂದು ಹೇಳಿದ್ದೀರಿ. ಮಾನ್ಯ ಮಂತ್ರಿಗಳು ಈ ರಸ್ತೆಯನ್ನು ನೋಡಿದರೆ ಯಾವುದು ಸರಿ ಯಾವುದು ತಪ್ಪು ಎಂಬುದು ಅವರಿಗೆ ತಿಳಿಯುತ್ತಿತ್ತು ಎಂದು ನನಗನ್ನಿಸುತ್ತದೆ.

ಶ್ರೀ ಬಸವರಾಜ ಮಾಗಾವಿ.—ನಾನು ಒಂದು ಸಲ ಈ ರಸ್ತೆಯ ಮೇಲೆ ಹೋಗಿದ್ದೇನೆ. ಅದರ ಕಲ್ಪನೆ ನನಗೆ ಸಂಪೂರ್ಣವಾಗಿ ಇದೆ.

ಶ್ರೀ ಜಿ. ಎನ್. ಪಾಟೀಲ್.—ಹಣ ಖರ್ಚು ಮಾಡಿದ್ದೇವೆ, ಮತ್ತು ಮಾಡುತ್ತಿದ್ದೇವೆ ಎಂದು ಹೇಳಿದಿರಿ. ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬುದನ್ನು ವಿವರವಾಗಿ ಹೇಳುತ್ತೀರಾ?

ಶ್ರೀ ಬಸವರಾಜ ಮಾಗಾವಿ.—

1962–1963 ರಲ್ಲಿ	23,950 ರೂಪಾಯಿಗಳು
1963–1964 ರಲ್ಲಿ	24,701 ರೂಪಾಯಿಗಳು
1964–1965 ರಲ್ಲಿ	16,813 ರೂಪಾಯಿಗಳು
1966–1967 ರಲ್ಲಿ	24,316 ರೂಪಾಯಿಗಳು
1967–1968 ರಲ್ಲಿ	2,887 ರೂಪಾಯಿಗಳು

ಈ ಪ್ರಕಾರ ವ್ಯಯ ಮಾಡಿದ್ದೇವೆ.

ಶ್ರೀ ಎಂ. ನಾಗಪ್ಪ.—ಇದಕ್ಕಾಗಿ ಒಟ್ಟು ಮಾಡಿರುವ ಎಸ್ಟಿಮೇಟು ಎಷ್ಟು ? ಮತ್ತು ಇದರಲ್ಲಿ ಎಷ್ಟು ಖರ್ಚು ಮಾಡಲಾಗಿದೆ ಮತ್ತು ಇನ್ನೂ ಎಷ್ಟು ಹಣ ಉಳಿದಿದೆ ? ಎರಡನೇದು 27 ನಾಲೆಗಳಲ್ಲಿ 18 ನಾಲಾಗಳನ್ನು ಮಾಡಿಜೆ ಎಂದು ಹೇಳಿದಿರಿ, ಇನ್ನೂ ಉಳಿಕೆಯಾಗಿರುವ ಒಂಬತ್ತು ನಾಲಾಗಳನ್ನು ಮಾಡದೇ ಇದ್ದರೆ ಬರುವ ರೇನಿ ಸೀಸನ್‌ನಲ್ಲಿ ಜನರು ಓಡಾಡುಲಕ್ಕೆ ತೊಂದರೆಯಾಗುತ್ತದೆ ಎನ್ನುವುದು ಸರಕಾರದ ಗಮನಕ್ಕೆ ಬರಲಿಲ್ಲವೇ ! ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಬಸವರಾಜ ಮಾಗಾವಿ.—14 ನಾಲಾಗಳನ್ನು ಕಟ್ಟಿರುವುದರ ಜೊತೆಗೆ ಇನ್ನೂ ನಾಲ್ಕು ಮೇಜರು ಬ್ರಿಡ್ಜಗಳನ್ನು ಮಾಡಲಾಗಿವೆ. ಇದರಲ್ಲಿ ಪ್ರತಿಯೊಂದಕ್ಕೂ ಸಪರೇಟಾಗಿ ಎಸ್ಟಿಮೇಟುಗಳನ್ನು ಮಾಡಬೇಕು. ಇದರ ಬಗ್ಗೆ ವಿವರಗಳು ನನ್ನಲ್ಲಿ ಈಗ ಇಲ್ಲ. ಮಾನ್ಯ ಸದಸ್ಯರು ಬೇರೆ ಒಂದು ಪ್ರಶ್ನೆ ಹಾಕಿದರೆ ಆಗ ಎಲ್ಲ ವಿವರಗಳನ್ನೂ ಅವರಿಗೆ ಒದಗಿಸಿ ಕೊಡಲು ಪ್ರಯತ್ನ ಮಾಡುತ್ತೇನೆ.